ಹೇಳಿದರು. ಈಗಾಗಲೇ ಅದರ ಬಗ್ಗೆ ಯೋಚನೆ ಮಾಡಿದ್ದೇವೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಬಹಳಷ್ಟು ವಿಷಯಗಳನ್ನು ಜಿಲ್ಲಾ ಪಂಚಾಯಿತಿಯಿಂದ ವಾಪಸ್ ಪಡೆದು, ಜಿಲ್ಲಾಧಿಕಾರಿಗಳ ಮುಖಾಂತರ implement ಮಾಡಬೇಕೆಂದು ನನ್ನದೊಂದು ಯೋಚನೆ ಇದೆ. ಬೇರೆ ಬೇರೆ ಇಲಾಖೆಯದು ನನಗೆ ಗೊತ್ತಿಲ್ಲ. ಆದರೆ ನನ್ನ ಇಲಾಖೆಯದನ್ನು ಜಿಲ್ಲಾಧಿಕಾರಿಗಳ ಮುಖಾಂತರವೇ ಮಾಡಲಿಕ್ಕೆ ಅತಿ ಶೀಘ್ರದಲ್ಲೇ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿರುವ ಭೋದಕರ ಕೊರತೆಯ ಬಗ್ಗೆ

210 (1501) ಶ್ರೀ ಬಾಲರಾಜ್. ಎಸ್. :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಹೊಸದಾಗಿ ಸ್ಥಾಪನೆಯಾಗುತ್ತಿರುವ ಕಾಲೇಜುಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಭೋದಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಭೋದಕರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಪ್ರಸಕ್ತ ಸಾಲಿನಲ್ಲಿ ಈ ಕೊರತೆಯನ್ನು ನೀಗಿಸಲಾಗುವುದೇ ;

ಈ) ಆರೋಗ್ಯ ಇಲಾಖೆಯಿಮದ ಅನುಭವಿ ತಜ್ಞ ವೈದ್ಯರನ್ನು ವೈದ್ಯಕೀಯ ಕಾಲೇಜುಗಳಲ್ಲಿ ಭೋದಕರಾಗಿ ನೇಮಕ ಮಾಡುವಂತೆ ಮನವಿಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

ಊ) ಹಾಗಿದ್ದಲ್ಲಿ, ಸದರಿಯವರನ್ನೇ ನೇಮಕ ಮಾಡಿಕೊಳ್ಳಲಾಗುವುದೇ ?

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ಬೆಂಗಳೂರು ಮತ್ತು ಮೈಸೂರು ವೈದ್ಯಕೀಯ ವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿರುವ ಹಿನ್ನೆಲೆಯಲ್ಲಿ, ಎಂ.ಸಿ.ಐ. ನಿಯಮಾವಳಿಗಳ ಅನುಸಾರವಾಗಿ ಕೊರತೆ

ಇರುವ ಬೋಧಕ ಹುದ್ದೆಗಳನ್ನು ತುಂಬಲು ವಾಕ್ ಇನ್ ಇಂಟರ್ ವ್ಯೂ ಮೂಲಕ ಭರ್ತಿ ಮಾಡಲಾಗುತ್ತಿದೆ.

ಹೊಸ ವೈದ್ಯಕೀಯ ವಿದ್ಯಾಲಯಗಳಲ್ಲಿ ಪ್ರಥಮ ಹಂತಕ್ಕೆ ಎಂ.ಸಿ.ಐ. ನಿಯಮಗಳಂತೆ ಬೇಕಾಗಿರುವ ಬೋಧಕ ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ.

ಇ) ಹೌದು.

ಈ) ಹೌದು.

ಉ) ವೃಂದ ಬದಲಾವಣೆ ಬಗ್ಗೆ ಸರ್ಕಾರಕ್ಕೆ 25 ವೈದ್ಯರುಗಳ ಪ್ರಸ್ತಾವನೆಗಳು ಬಂದಿದ್ದು, ಅವುಗಳ ಪೈಕಿ 3 ವೈದ್ಯರಿಗೆ ವೃಂದ ಬದಲಾವಣೆ ನೀಡಲಾಗಿದೆ.

ಊ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಬಾಲರಾಜ್.–ಮಾನ್ಯ ಅಧ್ಯಕ್ಷರೆ, ಈಗಾಗಲೆ ಈ ರಾಜ್ಯದಲ್ಲಿ ಅನೇಕ ವೈದ್ಯಕೀಯ ಕಾಲೇಜುಗಳನ್ನು ಈಗ ಸ್ಥಾಪನೆ ಮಾಡುತ್ತಿರುವ ಸಂದರ್ಭದಲ್ಲಿ ಬೋಧಕರ ಕೊರತೆ ಇರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಬೋಧಕರ ಕೊರತೆ ಇರುವ ಬಗ್ಗೆ ಮಾನ್ಯ ಸಚಿವರು ಒಪ್ಪಿಕೊಂಡು ಅದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ಕ್ರಮಗಳ §UÉÆwÛ½¹zÁ¸ÀgÉÆF ¸ÁºÀ£ÀÄß PÉgÀ¸ÉÛÃªÉÄÃ¯ÁzÀ¨sÁUÀ¢ÞzÀÄÝ, ¸ÀwÛgÀ¸ÁªÀ? ªÀÄvÀÄÛ Change of Cadre, ಆ ವೃಂದ ಬದಲಾವಣೆ ಎನಿದೆ, ಅದನ್ನು ಮಾಡುತ್ತೀರಾ ಎಂದು ನಾನು ಕೇಳಿದ್ದಕ್ಕೆ ಮಾನ್ಯ ಸಚಿವರು 'ಹೌದು' ಎಂದು ಉತ್ತರಿಸಿದ್ದಾರೆ. ಆದರೆ ನನ್ನ ಮನವಿ ಇಷ್ಟೇ. ಇಡೀ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪೂರಕವಾಗುವಂತೆ, ವಿದ್ಯಾರ್ಥಿಗಳಿಗೆ ಏನು ಬೋಧನೆ ಮಾಡಬೇಕಾಗಿದೆ, ಅವರಿಗೆ ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಏಕೆಂದರೆ, ಯಾವ ಶಿಕ್ಷಣವನ್ನು ವಿದ್ಯಾರ್ಥಿಗಳು ನೀಡಬೇಕಾಗಿದೆ, ಆ ಸಮಯ ಕಳೆದು ಹೋದರೆ, ಬಹುಶಃ ಅದನ್ನು ಕಲಿಯಲಿಕ್ಕೆ ಸಾಧ್ಯವಿಲ್ಲ. ಮತ್ತೆ ಅವರಿಗೆ ಸಮಯ ಕೊಡಲಿಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಕಡ್ಡಾಯವಾಗಿ ಅವರಿಗೆ ತಜ್ಞ ಶಿಕ್ಷಕರನ್ನು ಕೊಡುವುದರ ಮುಖಾಂತರ, ಅವರ ವಿದ್ಯಾಭ್ಯಾಸಕ್ಕೆ ಪೂರಕವಾದಂತಹ ಕೆಲಸವನ್ನು ಮಾಡಬೇಕು. ಆ ನಿಟ್ಟಿನಲ್ಲಿ ವೃಂದ ಬದಲಾವಣೆಗೆ 25 ವೈದ್ಯರುಗಳ ಪ್ರಸ್ತಾವನೆ ಬಂದಿದ್ದು, ಅವುಗಳ ಪೈಕಿ 3 ವೈದ್ಯರಿಗೆ ಅನುಮತಿ ನೀಡಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಉಳಿದವರಿಗೂ ಕೊಟ್ಟರೆ, ಬಹುಶಃ ಆ ಶಿಕ್ಷಣ ವ್ಯವಸ್ಥೆಯನ್ನು

ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ತಾವೇನು ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು. ಆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಒತ್ತಾಯಿಸುತ್ತಿದ್ದೇನೆ.

ಡಾ॥ ವಿ.ಎಸ್. ಆಚಾರ್ಯ.– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಾಲರಾಜ್‌ರವರು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಬೋಧಕರ ಕೊರತೆಯನ್ನು ನೀಗಿಸಲಿಕ್ಕೆ ನಮ್ಮ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. Walk in interview ಮುಖಾಂತರವೂ ತೆಗೆದುಕೊಳ್ಳುತ್ತಿದ್ದೇವೆ. ಬೆಂಗಳೂರು ಮತ್ತು ಮೈಸೂರಿನ ಮೆಡಿಕಲ್ ಕಾಲೇಜ್‌ಗಳು, ಹಳೆ ಕಾಲೇಜ್‌ಗಳು, ಅಲ್ಲಿ ಸ್ವಲ್ಪ ಕೊರತೆ ಜಾಸ್ತಿಯಿದೆ. ಅದನ್ನು ನೀಗಿಸಲಿಕ್ಕೆ ನಾವು ಈಗ ಕ್ರಮ ತೆಗೆದುಕೊಂಡಿದ್ದೇವೆ. Junior levelನಲ್ಲಿ ಇರುವಂತಹ ಶಿಕ್ಷಕರನ್ನು ಯಾರ್ಯಾರಿಗೆ experience ಆಗಿದೆ, ಅವರಿಗೆ MCI ನಿಯಮಾವಳಿ ಪ್ರಕಾರ Assistant, Assistant Professor, Professor ಆಗಿ ಮಾಡಿ, ಕೆಳ ಶ್ರೇಣಿಯಲ್ಲಿ ನೇಮಕಾತಿಗೆ ಸುಲಭದಲ್ಲಿ ಒಳ್ಳೆಯವರು ಡಾಕ್ಟರ್ಸ್ ಯಾರು ಸಿಗುತ್ತಾರೋ, ಅವರಿಗೆ ಮಾಡುತ್ತಿದ್ದೇವೆ. ಸರ್ಕಾರಿ ಕಾಲೇಜುಗಳಲ್ಲಿ ಕಲಿಯುವಂತಹ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದಂತಹ ರೀತಿಯ ತರಬೇತಿ ನೀಡುವ ವ್ಯವಸ್ಥೆ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಈ ಸದನದ ಮುಖಾಂತರ ಭರವಸೆ ಕೊಡುತ್ತಿದ್ದೇನೆ. ನಮ್ಮ ರಾಜ್ಯದ ಹೊಸ ಆರು ಮತ್ತು ಹಳೆಯ ನಾಲ್ಕು, ಒಟ್ಟು ಹತ್ತು ಸರ್ಕಾರಿ ವೈದ್ಯಕೀಯ ಕಾಲೇಜ್‌ಗಳಲ್ಲಿ ಅತ್ಯುತ್ತಮವಾದಮತಹ building infrastructure ಅದೇ ರೀತಿ best and broad spectrum of equipments ಕಲಿಯುವಾಗ ಅವರಿಗೆ ಬೇಕಾಗುತ್ತದೋ, ಅವನ್ನೆಲ್ಲವನ್ನೂ ಕೂಡ ಇವತ್ತು ಅವರಿಗೆ ಒದಗಿಸುತ್ತಿದ್ದೇವೆ. Most competent teachers ನೇಮಕ ಮಾಡಿಕೊಳ್ಳುತ್ತಿದ್ದೇವೆ. ನಮ್ಮ medical education teaching programme ತುಂಬಾ ಚೆನ್ನಾಗಿದೆ. ಶೈಕ್ಷಣಿಕ ವಾತಾವರಣ ಅತ್ಯುತ್ತಮ ರೀತಿಯಲ್ಲಿ ಇರುವಂತೆ ಮಾಡಿ, ಒಳ್ಳೆಯ ಗುಣಮಟ್ಟದ ವೈದ್ಯರು ನಮ್ಮ ಕಾಲೇಜ್‌ಗಳಿಂದ ಹೊರಗೆ ಬರುವ ಹಾಗೆ ಸಕಲ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ಕೆಲವು ಫಲಿತಾಂಶಗಳು ಒಳ್ಳೆಯ ರೀತಿಯಲ್ಲಿ ನಮಗೆ ತೋರಿಬರುತ್ತಿದೆ, ಇದನ್ನು ನಾವು ಮುಂದುವರೆಸುತ್ತೇವೆ. ಮತ್ತೊಂದು ವಿಷಯ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತಜ್ಞತೆಯನ್ನು ಪಡೆದಿರುವ ವೈದ್ಯರು ನಿಯೋಜನೆ ಮೇಲೆ ಬರಬೇಕೆಂದು ಹೇಳಿದರು. ನಾವು ಈಗಾಗಲೇ ಬರೆಯುತ್ತಿದ್ದೇವೆ ಮೆಡಿಕಲ್ ಕಾಲೇಜಿನಲ್ಲಿ ಬೋದನೆ ಕ್ಷೇತ್ರಕ್ಕೆ ಬರಬೇಕೆಂದಿರುವವರನ್ನು ತಾವು ಬಿಟ್ಟುಕೊಡಬೆಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹೇಳುತ್ತಿದ್ದೇವೆ, ಅವರು ಕ್ರಮಾನುಗತವಾಗಿ ಬಿಟ್ಟುಕೊಡುತ್ತಿದ್ದಾರೆ. ಅವರು ನಮಗೆ ಆ ರೀತಿ ಕೊಟ್ಟಿದ್ದರಿಂದಲೇ ನಮ್ಮ ಡೆಂಟಲ್ ಕಾಲೇಜಿಗೆ 10 ಜನ ತಜ್ಞ ವೈದ್ಯರು ಇವತ್ತು ಸಿಗುವಂತಾಗಿದೆ. ಆ ದಿಸೆಯಲ್ಲಿ ನಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದೇವೆ.

ಶ್ರೀ ಎಸ್. ಬಾಲರಾಜ್.– ಇದಕ್ಕೆ ಪೂರಕವಾದಂತೆ ಒಂದು ವಿಷಯವನ್ನು ತಮಗೆ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗ ಇನ್ ಸರ್ವಿಸ್ ಪಿಜಿ ಮಾಡುವ ವೈದ್ಯರಿಗೆ ನಮ್ಮಲ್ಲಿ ಸಂಬಳವನ್ನೂ ಕೊಟ್ಟು, ಈಗ ಬೇರೆ ಕಾಲೇಜುಗಳಲ್ಲಿ ಓದಿದರೆ, ಸುಮಾರು 40–50 ಲಕ್ಷ ರೂಪಾಯಿಗಳನ್ನು ಕಟ್ಟಿ ಓದಬೇಕಾಗುವ ಪರಿಸ್ಥಿತಿ ಇರುವ ವ್ಯವಸ್ಥೆಯಲ್ಲಿ, ಸರ್ಕಾರ ಅವರಿಗೆ ಪೂರ್ಣ ಪ್ರಮಾಣದಲ್ಲಿ ಎಲ್ಲಾ ಸವಲತ್ತುಗಳನ್ನು ಕೊಟ್ಟು ಪಿಜಿ ಮಾಡುವ ಅನುಕೂಲವನ್ನು ಮಾಡಿಕೊಡುತ್ತಿದೆ. ಅದಾದ ನಂತರ ನಮ್ಮಲ್ಲಿರುವ ಕಂಡಿಷನ್ಸ್ ಎನು ಹೇಳುತ್ತಿದೆ, ನಾವು ಎನು ಬೈಂಡಿಂಗ್ ಮಾಡಿಕೊಳ್ಳುತ್ತೇವೆ, ಏನು ಬಾಂಡ್‌ನಲ್ಲಿ ಬರೆಯಿಸಿಕೊಳ್ಳುತ್ತೇವೆ, ಅದು ಕೇವಲ 3 ವರ್ಷವೋ, 4 ವರ್ಷವೋ, ಕಲವು ನಿಯಮಾವಳಿ ಪ್ರಕಾರ ಅದು ಸೀಮಿತವಾಗುತ್ತದೆ. ಅಂದರೆ ಅವರು 3 ವರ್ಷ ತೆಗೆದುಕೊಂಡಿರುವ ಸಂಬಳ, ಅದಕ್ಕೆ ಪೆನಾಲ್ಟಿಯನ್ನು ತುಂಬಿದರೆ ಅವರು ಅಲ್ಲಿ ಬಿಟ್ಟುಬರಬಹುದು. ಇದು ಬಹಳ ಒಂದು ದುರಂತ, ಏಕೆಂದರೆ, ನಾವು ನಮ್ಮ ಸಮಯವನ್ನು ವ್ಯರ್ಥ ಮಾಡಿದ್ದೇವೆ, ಇದೆಲ್ಲಾ ಬಡವರ ದುಡ್ಡು, ಅವರ ದುಡ್ಡಿನಲ್ಲಿ ಓದಿರುವುದು, ಬಡವರಿಗೆ ಸೇವೆ ಸಲ್ಲಿಸುವ ಅವಕಾಶವನ್ನು ಅವರಿಗೆ ಕೊಡದಿದ್ದರೆ, ಅವರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳದಿದ್ದರೆ, ನಾವು ಎನು ಸಾರ್ಥಕ ಮಾಡಿಕೊಂಡಂತಾಗುತ್ತದೆ ? ಆ ದೃಷ್ಟಿಯಲ್ಲಿ ಅವರಿಗೆ ಕಡ್ಡಾಯವಾಗಿ ನಮ್ಮಲ್ಲೇ ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ಮಾಡಬೇಕು. ಇವತ್ತು ಕೂಡ ನಮ್ಮ ಕೊಳ್ಳೆಗಾಲ ಕ್ಷೇತ್ರದ್ಲಿ 150 ಹಾಸಿಗೆಯ ಆಸ್ಪತ್ರೆ ಇದೆ, ಆದರೆ ಅಲ್ಲಿ ಲೇಡಿ ಮೆಡಿಕಲ್ ಆಫೀಸರ್ ಇಲ್ಲ. ಮಹಿಳೆಯರು ಅವರ ಅನಾರೋಗ್ಯಕ್ಕೆ ಹೋಗುವ ಸಂದರ್ಭದಲ್ಲಿ

ಯಾರನ್ನು ಭೇಟಿ ಮಾಡುತ್ತಾರೆ ? ಗ್ರಾಮೀಣ ಪ್ರದೇಶದಲ್ಲಿ ಇವತ್ತು ಕುಡ ನಮ್ಮಲ್ಲಿ ಕಟ್ಟುಪಾಡುಗಳಿವೆ, ಮಹಿಳೆಯರು ತಮ್ಮ ಸಮಸ್ಯೆಗಳನ್ನು ಪುರುಷ ವೈದ್ಯರ ಹತ್ತಿರ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂತಹ ಸಂದರ್ಭಗಳಿರುವಾಗ ಲೇಡಿ ಮೆಡಿಕಲ್ ಆಫೀಸರ್ಸ್ ಇಲ್ಲದಿರುವ ಒಳ್ಳೊಳ್ಳೆ ಆಸ್ಪತ್ರೆಗಳು ಇವತ್ತು ಕೂಡ ಇದೆ. ಇದೆಲ್ಲವನ್ನೂ ನೀಗಿಸುವ ದೃಷ್ಟಿಯಿಂದ ತಾವು ಈ ವಿಷಯದಲ್ಲಿ ಒಂದು ಗಂಭೀರವಾದ ಪ್ರಯತ್ನವನ್ನು ಮಾಡಿ, ಆ ಮುಖಾಂತರ ಅದು ಶಿಕ್ಷಣಕ್ಕೆ ಸಂಬಂಧಿಸಿದ್ದು ಇರಬಹುದು, ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದು ಇರಬಹುದು, ಅವರನ್ನು ಕಡ್ಡಾಯವಾಗಿ ಸರ್ಕಾರಿ ಸೇವೆಯಲ್ಲೇ ಮುಂದುವರೆಸಬೇಕು. ಅದಕ್ಕೆ ತಾವು ವಿಶೇಷ ಕಾಯಿದೆಯನ್ನು ಮತ್ತು ಕಾನೂನನ್ನು ರೂಪಿಸುವುದರ ಮುಖಾಂತರ ಅದನ್ನು ಉಳಿಸಿಕೊಳ್ಳಬೇಕೆಂಬುದು ನನ್ನ ಪ್ರಾರ್ಥನೆ.

ಡಾ॥ ವಿ.ಎಸ್. ಆಚಾರ್ಯ.–In serviceನಿಂದ ಸ್ನಾತಕೋತ್ತರ ಡಿಗ್ರಿಗೆ ಬರುವವರಿಗೆ ಆ ದಿವಸದಿಂದಲೇ ನಮ್ಮ ಮೆಡಿಕಲ್ ಎಜ್ಯುಕೇಷನ್‌ನಿಂದ ಅವರ ವೇತನ ಸ್ಪೈಫಂಡ್‌ಅನ್ನು ಕೊಡುತ್ತಿದ್ದೇವೆ. ಸ್ನಾತಕೋತ್ತರ ಡಿಗ್ರಿಯಾದ ನಂತರ ಅವರು ಮೆಡಿಕಲ್ ಎಜ್ಯುಕೇಷನ್‌ನಲ್ಲಿ ಕಂಟಿನ್ಯೂವಾಗಬೇಕು. ತಜ್ಞ ವೈದ್ಯರಾಗಿ ನಮ್ಮ ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ಸಿಗಬೇಕೆಂದು ಹೇಳುವ ಇಚ್ಛೆ ಏನಿದೆ, ಸರ್ಕಾರದ ಇಚ್ಛೆ ಅದೇ ಆಗಿದೆ. ಈಗ ಅವರು ಬಿಟ್ಟು ಹೋಗುವ ಸಂಭವ ಹೆಚ್ಚು ಏಕೆಂದರೆ, ನಾವು ಅವರ ವೇತನ ಸೇರಿದಂತೆ ಸೇವಾ ಸೌಲಭ್ಯವನ್ನು ಸಾಕಷ್ಟು ಮಟ್ಟಿಗೆ ಸುಧಾರಿಸಿದ್ದೇವೆ. ಒಬ್ಬ Assistant Professor ಆಗಿ ಬರುವವರಿಗೆ ರೂ. 40,000, Associate Professorಗೆ ರೂ. 50,000, ಮತ್ತೆ Professorಗೆ ರೂ. 60,000–70,000 ವೇತನವೆಂದು ಇರುವುದರಿಂದ, ಅದು ಆಕರ್ಷಕವಾಗಿ ಈಗಿರುವುದರಿಮದ ಅವರು ಹೆಚ್ಚಿನ ಮಟ್ಟಿಗೆ ನಮ್ಮಲ್ಲಿ ಉಳಿಯುತ್ತಾರೆ. ಆದರೂ ನೀವು ಹೇಳಿದಂತೆ ಅವರನ್ನು ಬೈಂಡ್ ಮಾಡಲು ಏನಾದರೂ ಕಾನೂನು ತರುವುದಕ್ಕಾಗುವುದಿದ್ದರೆ ಅಥವಾ ನಿಯಮಾವಳಿ ಮಾಡುವುದಿದ್ದರೆ, ಅವನ್ನು ಯೋಚನೆ ಮಾಡುತ್ತೇವೆ, ಅವರು ಕೊಟ್ಟಿರುವ ಸಲಹೆ ಸರಿಯಾಗಿದೆ.

ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಹಣದ ವೆಚ್ಚ

381 ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–